**ದಿನಾಂಕ : 20.03.2021 ರಂದು ಬೆಳಿಗ್ಗೆ 11.00 ಗಂಟೆಗೆ ವಾರ್ಡ್-80 ರ ವಾರ್ಡ್ ಕಛೇರಿಯಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು**

ವಾರ್ಡ್ ಸಂಖ್ಯೆ-80 ಹೊಯ್ಸಳನಗರ ವಾರ್ಡ್ ಕಛೇರಿಯಲ್ಲಿ ದಿನಾಂಕ 20.03.2021 ರಂದು ಬೆಳಿಗ್ಗೆ 11.00 ಗಂಟೆಗೆ ಮಾನ್ಯ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರು ನಿಯೋಜಿಸಿರುವ ವಾರ್ಡ್‌ನ ನೋಡಲ್ ಅಧಿಕಾರಿಯವರ ಅಧ್ಯಕ್ಷತೆಯಲ್ಲಿ, ವಾರ್ಡ್ ಸಮಿತಿ ಸಭೆಯನ್ನು ನಡೆಸಲಾಗಿದ್ದು, ಈ ಕೆಳಕಂಡಂತೆ ಸದಸ್ಯರು ಸಭೆಯಲ್ಲಿ ಭಾಗವಹಿಸಿರುತ್ತಾರೆ.

**ಸಭೆಗೆ ಹಾಜರಿದ್ದ ಸದಸ್ಯರು ಹಾಗೂ ಅಧಿಕಾರಿಗಳು**

1. ಶ್ರೀ.ಎಂ.ಲೋಕೇಶ್ – ಅಧ್ಯಕ್ಷರು ಮತ್ತು ನೋಡಲ್ ಅಧಿಕಾರಿಗಳು, ವಾರ್ಡ್-80
2. ಶ್ರೀ.ಲಿಂಗರಾಜೇಗೌಡ –ಸಹಾಯಕ ಅಭಿಯಂತರರು (ಸದಸ್ಯ ಕಾರ್ಯದರ್ಶಿ)
3. ಶ್ರೀ.ನವೀನ್ – ಕಿ.ಆ.ಪ
4. ಶ್ರೀ.ಜಗದೀಶ್ – ಎಇಇ, ಬಿಡಬ್ಲ್ಯೂಎಸ್ಎಸ್‌ಬಿ
5. ಶ್ರೀ.ನಾಗರಾಜ್ – ಎಇಇ, ಬಿಡಬ್ಲ್ಯೂಎಸ್ಎಸ್‌ಬಿ
6. ಶ್ರೀ.ದುರ್ಗಾಪ್ರಸಾದ್ – ಎಇ, ಎಲೆಕ್ಟ್ರಿಕಲ್ಸ್
7. ಶ್ರೀ.ಮಂಜುನಾಥ್ – ಎಇಇ, ಬೆಸ್ಕಾಂ
8. ಶ್ರೀ.ರುದ್ರಮುನಿ – ಎಇ, ಬೆಸ್ಕಾಂ
9. ಶ್ರೀಮತಿ. ಚಿತ್ರಾ – ಹಿ.ಆ.ಪ ವಾಡ್-80
10. ಶ್ರೀ.ಪದ್ಮರಾಜ್ – ಎಇ, ಪ್ರಾಜೆಕ್ಟ್(ಪೂರ್ವ)
11. ಶ್ರೀ.ದೇವರಾಜ್ – ಅರಣ್ಯ ಇಲಾಖೆ
12. ಶ್ರೀ. ಗೌತಮ್ – ಸಹಾಯಕ ಅಭಿಯಂತರರು ಬೆಸ್ಕಾಂ
13. ಶ್ರೀ. ಗೋವಿಂದೇ ಗೌಡ – ತೋಟಗಾರಿಕೆ ಇಲಾಖೆ
14. ಶ್ರೀ. ಸತೀಶ್ – ಮಾರ್ಷಲ್
15. ಶ್ರೀ.ಅಶೋಕ ಶರತ್ – ಸದಸ್ಯರು
16. ಸ್ನೆಹಾ ನಂದಿಯಾಳ್ – ಸದಸ್ಯರು
17. ಶ್ರೀ.ಲೋಕೇಶ್ – ಸದಸ್ಯರು
18. ಶ್ರೀ.ಬಾಬುಕುಮಾರ್ – ಸದಸ್ಯರು
19. ಶ್ರೀ.ಕುಮಾರ್ – ಸದಸ್ಯರು
20. ಶ್ರೀ.ಆನಂದ್ – ಸದಸ್ಯರು

ಪ್ರಥಮವಾಗಿ ವಾರ್ಡ್ ಕಾರ್ಯದರ್ಶಿಗಳು ಹಾಗೂ ಸಂಚಾಲಕರು ಆದ ಶ್ರೀ.ಸಿ.ಲಿಂಗರಾಜೇ ಗೌಡರವರು ಸಭೆಗೆ ಆಗಮಸಿದ್ದ ಎಲ್ಲಾ ಅಧಿಕಾರಿಗಳು, ಸದಸ್ಯರು ಮತ್ತು ಸಾರ್ವಜನಿಕರನ್ನು ಸಭೆಗೆ ಸ್ವಾಗತಿಸಿದರು. ಹಾಗೂ ಹಿಂದಿನ ಸಭೆಯ ನಡವಳಿಗಳನ್ನು ಸಭೆಗೆ ಓದಿ ತಿಳಿಸಿದರು ಹಾಗೂ ಇಂದಿನ ಸಭೆಯ ಅಜೆಂಡಾ ಹಾಗೂ ಸಾರ್ವಜನಿಕರ ಕುಂದುಕೊರತೆಗಳ ಬಗ್ಗೆ ಸಭೆಗೆ ಮಾಹಿತಿ ನೀಡುವಂತೆ ಕೋರಿದರು. ಹಾಗೂ ವಾರ್ಡ್ ಸಮತಿಗೆ ಆಯ್ಕೆ ಮಾಡಲಾಗಿರುವ ಸದಸ್ಯರುಗಳ ಪಟ್ಟಿಯನ್ನು ಸಭೆಗೆ ತಿಳಿಸಿದರು.



Scanned with CamScanner

- ಹಿಂದಿನ ಸಭೆಯಲ್ಲಿ ಹೆಚ್.ಎ.ಎಲ್ 2ನೇ ಹಂತಹ ರೆಸಿಡೆಂಟ್ ವೆಲ್ಫೆರ್ ಅಸೋಸಿಯೇಶನ್‌ನ ಶ್ರೀ.ನಾಯ್ಡುರವರು ಕೋರಿದಂತೆ ವಾರ್ಡ್ ವ್ಯಾಪ್ತಿಯಲ್ಲಿನ ನಕ್ಷೆಗೆ ವ್ಯತಿರಿಕ್ತವಾಗಿರುವ ಹಾಗೂ ಕಾನೂನು ಬಾಹಿರವಾಗಿ ನಿರ್ಮಾಣವಾಗುತ್ತಿರುವ ಕಟ್ಟಡಗಳ ಪಟ್ಟಿಯನ್ನು ವಾರ್ಡಿನ ಸಹಾಯಕ ಅಭಿಯಂತರರು ಸಭೆಗೆ ಒದಗಿಸಿದರು.
- ಶ್ರೀಮತಿ.ಸ್ನೇಹಾ ನಂದಿಯಾಳ್ ಮತ್ತು ಶ್ರೀ.ಅಶೋಕ್ ಶರತ್‌ರವರು ಮಾತನಾಡಿ ವಾರ್ಡಿನಲ್ಲಿ ಅನಧಿಕೃತ ವಾಣಿಜ್ಯ ಮಳಿಗೆ ವಾಣಿಜ್ಯ ಪರವಾನಿಗೆ ನೀಡಿರುವುದಾಗಿ ಹಾಗೂ ವಾರ್ಡ್‌ನಲ್ಲಿರುವ 25 ಪಬ್‌ಗಳಲ್ಲಿ 6 ರೂಫ್‌ಟಾಫ್‌ಗಳಿದ್ದು, ಇದರ ಅನುಮತಿಯ ಬಗೆಗಿನ ವಿವರಗಳನ್ನು ದೂರಿರುತ್ತಾರೆ. ಈ ವಿಷಯವಾಗಿ ವಿವರಣೆ ನೀಡಲು ಮುಂದಿನ ಸಭೆಗೆ ಆರೋಗ್ಯ ಅಧಿಕಾರಿಗಳು, ಆರೋಗ್ಯ ವೈದ್ಯಾಧಿಕಾರಿಗಳು, ಹಿರಿಯ ಆರೋಗ್ಯ ಪರಿವೀಕ್ಷಕರು ಹಾಜರಿರಲು ಅಧ್ಯಕ್ಷರು ಸೂಚಿಸಿರುತ್ತಾರೆ.
- ಡಿಫೆನ್ಸ್ ಕಾಲೋನಿ. 3ನೇ ಮುಖ್ಯರಸ್ತೆಯಲ್ಲಿರುವ ಪಾರ್ಕ್ ನೊಳಗೆ ಬರುವ ಚರಂಡಿಯು ಕುಸಿದಿದ್ದು ಇದರ ಬಗ್ಗೆ ಶ್ರೀ.ಅಶೋಕ್ ಶರತ್‌ರವರು ದೂರು ನೀಡಿದ್ದು ಇದರ ಬಗ್ಗೆ ಸ್ಥಳ ಪರಿಶೀಲನೆ ಮಾಡಿ ಕ್ರಮ ಜರುಗಿಸಲು ಮತ್ತೊಮ್ಮೆ ಸೂಚಿಸಿದರು.
- ಇಂದಿರನಗರ 1ನೇ ಹಂತದಲ್ಲಿರುವ ವಿಕ್ಟರಿ ಆಟದ ಮೈದಾನದಲ್ಲಿರುವ ಕಲ್ಲು ಮಣ್ಣು ಮತ್ತು ಡೆಬ್ರಿಸ್ ತೆರವುಗೊಳಿಸಲು ಸ್ನೇಹಾ ನಂದಿಹಾಳ್ ರವರು ಹಿಂದಿನ ಸಭೆಯಲ್ಲಿ ಕೋರಿದ್ದ ಮೇರೆಗೆ ವಿಕ್ಟರಿ ಆಟದ ಮೈದಾನಲ್ಲಿ ಸ್ವಚ್ಛತಾ ಕೆಲಸವನ್ನು ಅಸೋಸಿಯೇನ್‌ರವರ ಸಹಯೋಗದೊಂದಿಗೆ ನಿರ್ವಹಿಸಲಾಗಿರುತ್ತದೆ ಎಂದು ಸಹಾಯಕ ಅಭಿಯಂತರರು ತಿಳಿಸಿದರು.
- ತಾಮರೈಕಣ್ಣನ್ ರಸ್ತೆಯ ಚರಂಡಿಯಲ್ಲಿರುವ ವಿದ್ಯುತ್ ಕಂಬವನ್ನು ತೆರವುಗೊಳಿಸಲ ಬೆಸ್ಕಾಂ ಇಲಾಖೆಯ ಅಧಿಕಾರಿಗಳಾದ ಶ್ರೀ.ರುದ್ರಮುನಿಯವರು ಒಪ್ಪಿರುತ್ತಾರೆ.
- ಶ್ರೀ.ಕುಮಾರ್, ಸದಸ್ಯರು ಮಾತನಾಡಿ, ತಾಮರೈ ಕಣ್ಣನ್ ರಸ್ತೆಯಲ್ಲಿ ಕಲ್ವರ್ಟ್ ನಿರ್ಮಿಸಲು ಕೋರಿರುತ್ತಾರೆ. ಇದಕ್ಕೆ ಸಹಾಯಕ ಅಭಿಯಂತರರು ಉತ್ತರಿಸಿ ನವನಗರೋತ್ಥಾನ ಕಾಮಗಾರಿಯ ವೇಳೆಯಲ್ಲಿ ನಿರ್ಮಿಸಿಕೊಡುವುದಾಗಿ ತಿಳಿಸಿದರು.
- ಶ್ರೀ.ಕುಮಾರ್, ಸದಸ್ಯರು ಮಾತನಾಡಿ, ರಾಮಚಂದ್ರ ಮೊದಲಿಯಾರ್ ರಸ್ತೆ ಮತ್ತು 6ನೇ ಅಡ್ಡರಸ್ತೆ, ಮರ್ಫಿಟೌನ್ ಇಲ್ಲಿ ಒಳಚರಂಡಿ ಪೈಪ್ ಅಳವಡಿಕೆಗಾಗಿ ಬಿಡಬ್ಲ್ಯೂಎಸ್‌ಎಸ್‌ಬಿ ಇಲಾಖೆಯವರು ರಸ್ತೆ ಅಗೆದಿರುವ ಭಾಗವನ್ನು ಪುನರ್‌ನಿರ್ಮಿಸಲು ಕೋರಿದರು. ಇದಕ್ಕೆ ಸಹಾಯಕ ಅಭಿಯಂತರರು ಕ್ರಮವಹಿಸುವುದಾಗಿ ತಿಳಿಸಿದರು.
- ಶ್ರೀ.ಕುಮಾರ್, ಸದಸ್ಯರು ಮಾತನಾಡಿ, ಮರ್ಫಿಟೌನ್ ವ್ಯಾಪ್ತಿಯ ಎಲ್ಲಾ ರಸ್ತೆಗಳಲ್ಲಿನ ಡೆಬ್ರಿಸ್ & ಬ್ಲಾಕ್ ಸ್ಪಾಟ್‌ಗಳನ್ನು ತೆರವುಗೊಳಿಸಲು ಕೋರಿದರು. ಇದಕ್ಕೆ ಕ್ರಮವಹಿಸುವುದಾಗಿ ಸಹಾಯಕ ಅಭಿಯಂತರರು ಹಾಗೂ ಸಂಬಂಧಪಟ್ಟ ಘನತ್ಯಾಜ್ಯ ಅಧಿಕಾರಿಗಳು ತಿಳಿಸಿದರು.
- ಮರ್ಫಿಟೌನ್ ಮತ್ತು ಲಕ್ಷ್ಮೀಪುರದ ಕೆಲವು ರಸ್ತೆಯ ಪಕ್ಕದಲ್ಲಿ ಹಳೆಯದಾದ ವಾಹನಗಳನ್ನು ಅನಧಿಕೃತವಾಗಿ ನಿಲ್ಲಿಸಿರುತ್ತಾರೆ. ಅವುಗಳನ್ನು ತೆರವುಗೊಳಿಸಲು ಕೋರಿದರು. ಇದಕ್ಕೆ ಸಂಬಂಧಪಟ್ಟ ಪೊಲೀಸ್ ಇಲಾಖೆಯ ಅಧಿಕಾರಿಗಳಿಗೆ ತಿಳಿಸಲಾಗುವುದು.
- ಲಕ್ಷ್ಮೀಪುರದ ಬಳಿ ಇರುವ ಬೃಹತ್ ಮಳೆನೀರುಗಾಲುವೆಗೆ ತಡೆಗೋಡೆಯನ್ನು ನಿರ್ಮಿಸಲು ಹರೀಶ್‌ರವರು ಕೋರಿದರು. ಇದಕ್ಕೆ ಸಂಬಂಧಪಟ್ಟ ಎಸ್‌ಡಬ್ಲ್ಯೂಡಿ ಇಲಾಖೆಯವರ ಗಮನಕ್ಕೆ ತರಲಾಗುವುದು.



Scanned with CamScanner

- ಕೆಲವು ಹುಡುಗರುಗಳು ಬಿನ್ನಮಂಗಲ ಜೋಗುಪಾಳ್ಯ ಪ್ರದೇಶಗಳಿಂದ ಬಂದು ನೊಂದಣಿಯಾಗದೇ ಇರುವ ಬೈಕ್‌ಗಳಲ್ಲಿ ವೇಗವಾಗಿ ಬರುವುದು, ವ್ಹೀಲಿಂಗ್ ಮಾಡುವುದು ಈ ರೀತಿಯ ಚಟುವಟಿಕೆಗಳನ್ನು ಮಾಡುತ್ತಿರುತ್ತಾರೆ ಎಂದು ಸದಸ್ಯರು ತಿಳಿಸಿದರು. ಇದಕ್ಕೆ ಸಂಬಂಧಪಟ್ಟಂತೆ ಕ್ರಮ ಕೈಗೊಳ್ಳಲು ಸಭೆಯಲ್ಲಿ ಹಾಜರಿದ್ದ ಪೊಲೀಸ್ ಅಧಿಕಾರಿಗಳಿಗೆ ತಿಳಿಸಲಾಯಿತು.
- ಇಂದಿರಾನಗರ 1ನೇ ಹಂತದ 10ನೇ ಅಡ್ಡರಸ್ತೆಯಲ್ಲಿ ಒಳಚರಂಡಿ ವ್ಯವಸ್ಥೆಯು ತುಂಬಾ ಹಳೆಯದಾಗಿದ್ದು ಹಾಗೂ ಚಿಕ್ಕದಾಗಿದ್ದು ಪದೆ ಪದೆ ಚರಂಡಿಯು ಕಟ್ಟಿಕೊಳ್ಳುತ್ತಿದ್ದು ನಿವಾಸಿಗಳಿಗೆ ತೊಂದರೆ ಅಗುತ್ತಿದೆ. ಆದುದರಿಂದ ಒಳಚರಂಡಿಯ ಪೈಪ್ ಗಳನ್ನು ಬದಲಾಯಿಸಲು ಕೋರಿದರು. ಮತ್ತು ಎರಡು ಬದಿಯ ಚರಂಡಿಗಳಲ್ಲಿ ಮಣ್ಣು ತುಂಬಿದ್ದು ತೆರವುಗೊಳಿಸಿದ ನಂತರ ರಸ್ತೆಗೆ ಡಾಂಬರಿಕರಣ ಮಾಡಲು ಕೊರಿದರು. ಇದಕ್ಕೆ ಸ್ಥಳ ಪರಿಶೀಲಿಸಿ ಕ್ರಮ ಕೈಗೊಳ್ಳಲು ಬಿ.ಡಬ್ಲ್ಯೂ.ಎಸ್.ಎಸ್.ಬಿ ಇಲಾಖೆಯ ಮತ್ತು ನಗರಪಾಲಿಕೆಯ ಅಧಿಕಾರಿಗಳಿಗೆ ತಿಳಿಸಲಾಯಿತು.
- ರಸ್ತೆಯ ತಿರುವಿನಲ್ಲಿ ತಳ್ಳುಗಾಡಿಗಳು ಮತ್ತು ವಾಹನಗಳನ್ನು ನಿಲ್ಲಿಸುತ್ತಿರುವುದರಿಂದ ಅಪಘಾತ ಉಂಟಾಗುವ ಸಾಧ್ಯತೆಯಿದ್ದು, ಅವುಗಳನ್ನು ತೆರವುಗೊಳಿಸಲು ಸದಸ್ಯರು ಕೋರಿದರು. ಇದಕ್ಕೆ ಸಂಬಂಧಪಟ್ಟಂತೆ ಕ್ರಮ ಕೈಗೊಳ್ಳಲು ಸಭೆಯಲ್ಲಿ ಹಾಜರಿದ್ದ ಪೊಲೀಸ್ ಅಧಿಕಾರಿಗಳಿಗೆ ತಿಳಿಸಲಾಯಿತು.
- ಮರ್ಫಿಟೌನ್ ಆಟದ ಮೈದಾನದಲ್ಲಿ ರಾತ್ರಿ ವೇಳೆಯಲ್ಲಿ ಸಹ ಕೆಲವರು ಆಟವಾಡುತ್ತಿದ್ದು, ಇದಕ್ಕೆ ಕಡಿವಾಣ ಹಾಕಲು ಆಟದ ಮೈದಾನಗಳಿಗೆ ಗೇಟ್ ಅಳವಡಿಸುವಂತೆ ಸದಸ್ಯರಾದ ಕುಮಾರ್‌ರವರು ಕೋರಿದರು. ಈ ಬಗ್ಗೆ ಪರಿಶೀಲಿಸುವಂತೆ ಸಂಬಂಧಪಟ್ಟವರಿಗೆ ತಿಳಿಸಲಾಯಿತು.
- ಲಕ್ಷ್ಮೀಪುರ, ಜೈರಜ್‌ನಗರ, ಮರ್ಫಿಟೌನ್, ಬಿನ್ನಮಂಗಲ ಮುಂತಾದ ಪ್ರದೇಶಗಳಲ್ಲಿ ಸಿಸಿ ಕ್ಯಾಮೆರಾಗಳನ್ನು ಅಳವಡಿಸಲು ಕೋರಿದರು. ಇದಕ್ಕೆ ಮುಂದಿನ ದಿನಗಳಲ್ಲಿ ಅನುದಾನದ ಲಭ್ಯತೆಗೆ ಅನುಸಾರವಾಗಿ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಲಾಯಿತು.

  ಲಕ್ಷ್ಮೀಪುರ ಪ್ರದೇಶಗಳಲ್ಲಿ ಅಪರಿಚಿತ ವ್ಯಕ್ತಿಗಳು ರಾತ್ರಿವೇಳೆಯಲ್ಲಿ ಓಡಾಡುತ್ತಿರುವ ಬಗ್ಗೆ ಸದಸ್ಯರಾದ ಶ್ರೀ.ಲೋಕೇಶ್‌ರವರು ತಿಳಿಸುತ್ತಾ, ರಾತ್ರಿವೇಳೆಯಲ್ಲಿ ಗಸ್ತು ಹಾಕಲು ಕೋರಿದರು. ಇದಕ್ಕೆ ಸಂಬಂಧಪಟ್ಟಂತೆ ಕ್ರಮ ಕೈಗೊಳ್ಳಲು ಸಭೆಯಲ್ಲಿ ಹಾಜರಿದ್ದ ಪೊಲೀಸ್ ಅಧಿಕಾರಿಗಳಿಗೆ ತಿಳಿಸಲಾಯಿತು.

ಮೇಲ್ಕಂಡಂತೆ ತಿಳಿಸಲಾಗಿರುವ ಕುಂದುಕೊರತೆಗಳ ಬಗ್ಗೆ ಸಂಬಂಧಪಟ್ಟ ಆಯಾ ಇಲಾಖೆಯ ಅಧಿಕಾರಿಗಳಿಗೆ ಕ್ರಮವಹಿಸಲು ಹಾಗೂ ಸಮಿತಿಯ ಸದಸ್ಯರು ಕೋರಿರುವ ವಿವರಗಳನ್ನು ಮುಂದಿನ ವಾರ್ಡ್ ಸಮಿತಿಯ ಸಭೆಗೆ ಒದಗಿಸುವಂತೆ ಸೂಚಿಸುತ್ತಾ, ಸಭೆಯನ್ನು ಮುಕ್ತಾಯಗೊಳಿಸಲಾಯಿತು.

20/3/2024

**ಕಾರ್ಯದರ್ಶಿಗಳು**
**ವಾರ್ಡ್ ಸಮಿತಿ–80**

**ಅಧ್ಯಕ್ಷರು**
**ವಾರ್ಡ್ ಸಮಿತಿ, ವಾರ್ಡ್ 80**
**ಹಾಗೂ ನೋಡಲ್ ಅಧಿಕಾರಿಗಳು,**
**ವಾರ್ಡ್ 80**



Scanned with CamScanner